For more job news visit : www.kpscvaani.com

ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ
(ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಾಯತ್ತ ಸಂಸ್ಥೆ)

KSCST Celebrating Golden Jubilee 1975 - 2025

Karnataka State Council for Science and Technology
(An autonomous organisation under Dept. of Science and Technology, Government of Karnataka)

No: KSCST/2.01/Deputation/2024-25/54 Date: 08-05-2025

## VACANCY CIRCULAR

**Sub: Filling up of the post of "Scientific Officer" on deputation basis**

The Karnataka State Council for Science and Technology (KSCST) is an Autonomous S&T organization under the Department of Science and Technology, Government of Karnataka located in the campus of Indian Institute of Science (IISc), actively engaged to identify problems / areas for the application of Science and Technology and to find scientific / technological solutions for the benefit of society at large.

1. It is proposed to fill up the vacant post of Scientific Officer in KSCST as indicated in Annexure-1 on deputation basis from amongst the eligible officers working in Central and State Government/Central and State PSUs/Central and State Autonomous/Statutory bodies/Universities established under the law.

2. Pay, allowances and service conditions of the officials selected on deputation will be governed by the provisions of the Cadre, Recruitment and Service Rules of KSCST & KCSR. Since KSCST has no residential facility, HRA as applicable to State Government/Central Government employee at Bangalore will be admissible.

3. Selected candidate will be appointed on deputation basis initially for a period of two (02) years, which may be extended on mutual consent up to a maximum period of five years, subject to satisfactory performance and review.

4. Absorption of the official can be considered either within a period two years or earlier of working on deputation on the post held by him/her subject to satisfactory performance of the official, acceptance of employee and submission of NOC from the parent organisation.

5. It is requested that wide publicity may be given to the vacancy circular amongst the staff working under your administrative control. A applications in the prescribed format (Annexure-2) along with attested copies of CRs of the officers for the last five years, who can be spared in the event of selection, may be sent to this office on or before **06-06-2025 at 5.30 PM**. Applications received after the last date or without CR dossiers, vigilance clearance and integrity certificate or otherwise found incomplete will not be considered. While forwarding the applications, it may also be verified and certified that the particulars furnished by the applicants are correct and no disciplinary proceedings are either pending or contemplated against him/her.

6. The details of the post (Annexure-1), prescribed application form (Annexure-2) and terms and conditions, etc. (Annexure-3) are available on the KSCST website www.kscst.karnataka.gov.in https://www.kscst.org.in/.

Sd/-
Executive Secretary



Indian Institute of Science Campus, Bengaluru - 560012
080-23341652, 23348848/49/40
office.kscst@iisc.ac.in, office@kscst.org.in
https://kscst.karnataka.gov.in & https://www.kscst.org.in

For more job news visit : www.kpscvaani.com

Annexure – 1

## KARNATAKA STATE COUNCIL FOR SCIENCE AND TECHNOLOGY

### Details of deputation post

| Sl. No | Particulars | Details |
|---|---|---|
| 1 | Name of the post | Scientific Officer, 01 (One) |
| 2 | Pay Scale of the post | Rs.90200-2300-99400-2700-115600-3100-134200-3500-155200-4000-159200 as per 7th revised scales of pay of Govt. of Karnataka. |
| 3 | Cadre | Group 'A' |
| 4 | Mode of Recruitment | On deputation basis. |
| 5 | Age limit | Maximum 45 years as on 01-05-2025 |
| 6 | Essential Eligibility Criteria for Deputation<br><br>Desirable experience | (i) Officers of the Central and State Government/Central and State PSUs/Central and State Autonomous/Statutory bodies/Recognized Universities established under the law, holding analogous post on regular basis in the parent department in the GOK pay scale of Rs. 90200-159200 or equivalent level in the pay matrix;<br>(ii) Should possessed 1St Class M. Tech /M.E with minimum Six (06) years of experience in Engineering or Sciences field.<br>Or<br>Ph.D in Science or Engineering with minimum three (03) years of experience in Engineering analysis.<br>(iii) Familiar with Karnataka Civil Service Rules (KCSR)<br>(iv) Must know Kannada reading, writing & speaking<br>(i) Experience in writing project proposals and the candidate should have completed at least one (1) Project as PI or Co-PI. |
| 6 | Duties and responsibilities of the post. | ➢ Scientific Officer shall report to the Executive Secretary & Secretary and shall be responsible for the work related to projects and programs.<br>➢ Drawing up of Science and Technology plans relevant to the State.<br>➢ Initiate and encourage Scientific & Technical personnel to contribute to fulfil the objectives of KSCST through innovative project proposals seeking funding from Government.<br>➢ Presentation to high level S&T Committees at the State and Central Government agencies and regular interactions with the respective Governments for monitoring & implementation of projects.<br>➢ Effective implementation of the KSCST projects and Programs.<br>➢ Any other work assigned by the superiors and Executive Secretary and Secretary. |
| 7 | Period of Deputation | Initially for a period of 02 years which is extendable up to a maximum of 05 years on mutual consent and review of the performance. |

For more job news visit : www.kpscvaani.com

ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ
(ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಾಯತ್ತ ಸಂಸ್ಥೆ)

KSCST Celebrating Golden Jubilee 1975 - 2025

Karnataka State Council for Science and Technology
(An autonomous organisation under Dept. of Science and Technology, Government of Karnataka)

**ಈ ಹಿಂದಿನ ನೇಮಕಾತಿ ಅಧಿಸೂಚನೆ ಸಂಖ್ಯೆ: ಕೆ.ಎಸ್.ಸಿ.ಎಸ್.ಟಿ /ನೇಮಕಾತಿ /03/2024-25/267 ದಿನಾಂಕ:- 2ನೇ ಸೆಪ್ಟೆಂಬರ್ 2024 ಅನ್ನು ಹಿಂಪಡೆದು ಈ ಕೆಳಕಂಡ ಮರು ಅಧಿಸೂಚನೆಯನ್ನು ಹೊರಡಿಸಲಾಗಿದೆ.**

ಸಂಖ್ಯೆ: ಕೆ.ಎಸ್.ಸಿ.ಎಸ್.ಟಿ /ನೇಮಕಾತಿ /03/2024-25/ 61    8ನೇ ಮೇ 2025

# ಮರು ಅಧಿಸೂಚನೆ

## ನೇರ ನೇಮಕಾತಿ

ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ (ಕೆ.ಎಸ್.ಸಿ.ಎಸ್.ಟಿ), ಕರ್ನಾಟಕ ಸರ್ಕಾರದ ,ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಡಿ ಒಂದು ಸ್ವಾಯುತ್ತ ಸಂಸ್ಥೆಯಾಗಿ ಕಾರ್ಯನಿರ್ವಹಿಸುವ ಒಂದು ವೈಜ್ಞಾನಿಕ ಸಂಸ್ಥೆಯಾಗಿದೆ. ಈ ಸಂಸ್ಥೆಯ ಮುಖ್ಯ ಉದ್ದೇಶವೆಂದರೆ ರಾಜ್ಯದ ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಉದ್ಭವಿಸುವ ಸಮಸ್ಯೆಗಳನ್ನು ಗುರುತಿಸಿ, ಅವುಗಳಿಗೆ ವೈಜ್ಞಾನಿಕ ಮತ್ತು ತಾಂತ್ರಿಕ ಪರಿಹಾರಗಳನ್ನು ಕಂಡುಕೊಂಡು ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಕೊಡುಗೆ ನೀಡುವುದು.

ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ (ಕೆ.ಎಸ್.ಸಿ.ಎಸ್.ಟಿ) ತನ್ನ ಸಂಸ್ಥೆಯಲ್ಲಿರುವ ಈ ಕೆಳಕಂಡ ಖಾಯಂ ಆಡಳಿತಾತ್ಮಕ ಹುದ್ದೆಗೆ ಭರ್ತಿ ಮಾಡಲು ಅರ್ಹ ಮತ್ತು ಅನುಭವಿ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುತ್ತಿದೆ. ಈ ಹುದ್ದೆಯಲ್ಲಿ ಕೆಲಸ ಮಾಡುವ ಅಭ್ಯರ್ಥಿಗಳು ಸಂಸ್ಥೆಯ ಒಟ್ಟಾರೆ ಬೆಳವಣಿಗೆಗೆ ಕೊಡುಗೆ ನೀಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ.

| ಹುದ್ದೆಯ ಹೆಸರು | ವೇತನ ಶ್ರೇಣಿ | ಹುದ್ದೆಗಳ ಸಂಖ್ಯೆ | Unreserved (UR) |
|---|---|---|---|
| ಆಡಳಿತಾಧಿಕಾರಿ | 83,700-1,55,200 (As per Karnataka 7th Pay) | 01 | |

1. **ಮೇಲಿನ ಹುದ್ದೆಗೆ ಅಗತ್ಯವಿರುವ ಶೈಕ್ಷಣಿಕ ಅರ್ಹತೆಗಳು ಮತ್ತು ಸೇವಾನುಭವಗಳು ಈ ಕೆಳಗಿನಂತಿವೆ:**

(a) **Essential Educational Qualification:**

(i) Any Postgraduate degree/Master's Degree with 55% marks or its Equivalent CPGA, from a recognised University.
(ii) Candidate Should have Studied Kannada as First/Second/Third language In 10th /SSLC or Its equivalent.

(b). **Desirable Educational Qualification:**
Professional Qualification in LLB from a recognised University



Indian Institute of Science Campus, Bengaluru - 560012
office.kscst@iisc.ac.in, office@kscst.org.in
080-23341652, 23348848/49/40
https://kscst.karnataka.gov.in & https://www.kscst.org.in

For more job news visit : www.kpscvaani.com

(c ). **Essential Experience:**

Candidates must have a minimum of ten (10) years of experience in the Karnataka State Government/Central Government/ Semi-Government organizations/ Universities/ Autonomous Bodies/ or Public Sector Undertakings (PSUs). The candidate must have experience in the areas of Procurement, Establishment, and Personnel matters (Service Matters). Out of the total experience, at least three (3) years should be in a Group B(as per state Govt Payscale) position or its equivalent capacity in the relevant fields mentioned above.

(d). **Desirable Experience:**

Experience in handling administrative, Legal/Disciplinary Cases & dealing with Finance, Procurement in E-procurement portal, GOK, GEM, Handling RTI.

**Job Description:**

**a.** The Incumbent shall be overall In-charge of Establishment and Administration which involves personnel management, formulation of policies, norms, promote HRD, interpretation and implementation of rules/ regulations of the Institute.

**b.** The incumbent shall assist in holding meetings and co- ordinate the offices of Secretary & Executive Secretary, Draft Agenda / Minutes of selection / Assessment Committee, Maintenance of confidential records, Co- ordination for smooth conduct of seminar, workshops, and meetings.

**c.** He/ She shall be responsible for the work related to Statutory compliances, Purchase through GEM & E-procurement portals, Recruitment of regular and Contractual posts and deal with Court/ Disciplinary cases.

**d.** The incumbent should have thorough knowledge of Karnataka Civil Service Rules (KCSR) RTI, IPGRS, KTPP, GEM, GFR rules.

**E .** Any other duties and functions as may be assigned by the Competent Authority.

**ಸೂಚನೆ**: (ಅ) ನಿಗದಿತ ಶೈಕ್ಷಣಿಕ ಅರ್ಹತೆಯ ಜೊತೆಗೆ ಈ ಮೇಲ್ಕಂಡ ಸೇವಾ ಅನುಭವಗಳನ್ನು **(Experience)** ಹೊಂದಿರುವ ಅಭ್ಯರ್ಥಿಗಳು ಮಾತ್ರ ನೇಮಕಾತಿಗಾಗಿ ಅರ್ಜಿ ಸಲ್ಲಿಸಲು ಅರ್ಹತೆಯನ್ನು ಹೊಂದಿರುತ್ತಾರೆ.

**(ಆ)** ಅಭ್ಯರ್ಥಿಗಳು ಸೇವಾನುಭವಕ್ಕೆ ಸಂಬಂಧಿಸಿದಂತೆ, ಅರ್ಜಿಸಲ್ಲಿಸುವ ಸಮಯದಲ್ಲಿ ಸಲ್ಲಿಸುವ ಪ್ರಮಾಣಪತ್ರಗಳು ಆಯಾ ನೇಮಾಕಾತಿ ಪ್ರಾಧಿಕಾರದ ಸಹಿಯನ್ನು ಒಳಗೊಂಡಿರಬೇಕು ಹಾಗೂ ನೇಮಾಕಾತಿ ಪ್ರಾಧಿಕಾರದ ಸಹಿಯನ್ನು ಒಳಗೊಂಡಿರದ ಹಾಗೂ ಅಸ್ಪಷ್ಟ ಪ್ರಮಾಣಪತ್ರಗಳನ್ನು ಸಲ್ಲಿಸಿರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

For more job news visit : www.kpscvaani.com

## 2. ಪ್ರಮುಖ ಸೂಚನೆಗಳು:

2.1 ಅಭ್ಯರ್ಥಿಗಳು ಕಡ್ಡಾಯವಾಗಿ ಜಿಮೇಲ್ ಖಾತೆಯನ್ನು(GMAIL ACCOUNT) ಹೊಂದಿರಬೇಕು ಹಾಗೂ ಅಭ್ಯರ್ಥಿಗಳು ಗೂಗಲ್ ಫಾರ್ಮ್ ಅನ್ನು ಭರ್ತಿ ಮಾಡಲು ಜಿಮೇಲ್ ಖಾತೆಯನ್ನು ಬಳಸಬೇಕು.

2.2 ಆನ್ಲೈನ್ ಗೂಗಲ್ ಫಾರಂನಲ್ಲಿ ಅಭ್ಯರ್ಥಿಗಳು ಸಕ್ರಿಯವಾದ ಅಧಿಕೃತ ಇಮೇಲ್ ಐಡಿಯನ್ನು ನಮೂದಿಸುವುದು ಕಡ್ಡಾಯ. ದೋಷಪೂರಿತ ಇಮೇಲ್ ಐಡಿಯಿಂದ ಉಂಟಾಗುವ ಯಾವುದೇ ತೊಂದರೆಗೆ ಮಂಡಳಿ ಜವಾಬ್ದಾರವಲ್ಲ.

2.3 ಅಭ್ಯರ್ಥಿಗಳು ತಮ್ಮ ಫೋಟೋ ಮತ್ತು ಸಹಿಯನ್ನು .jpg ಸ್ವರೂಪದಲ್ಲಿ ಮಾತ್ರ ಅಪ್ಲೋಡ್ ಮಾಡಬೇಕು ಮತ್ತು ಶಿಕ್ಷಣ / ಸೇವಾ ಅನುಭವ / ಮೀಸಲಾತಿ **(For Fee exemption)** ಇತ್ಯಾದಿಗಳನ್ನು ಬೆಂಬಲಿಸುವ ಇತರ ಎಲ್ಲಾ ದಾಖಲೆಗಳನ್ನು .pdf ಸ್ವರೂಪದಲ್ಲಿ ಅಪ್ಲೋಡ್ ಮಾಡಬೇಕು. ಪ್ರತಿ FILE ಗಾತ್ರವು ಗರಿಷ್ಠ 1 MB ಮೀರಬಾರದು.

2.4 ಅಭ್ಯರ್ಥಿಗಳು ಆನ್ಲೈನ್ ಮುಖಾಂತರ ಗೂಗಲ್ ಫಾರಂ ನಲ್ಲಿ ಅರ್ಜಿ ಭರ್ತಿ ಮಾಡುವ ಮೊದಲು ಅರ್ಹತೆಗೆ ಸಂಬಂಧಿಸಿದ ಎಲ್ಲಾ ಸೂಚನೆಗಳನ್ನು ಓದಿಕೊಳ್ಳತಕ್ಕದ್ದು ಹಾಗೂ ನೀಡಿರುವ ಸೂಚನೆಗಳನ್ವಯ ಅರ್ಜಿಯನ್ನು ಭರ್ತಿ ಮಾಡತಕ್ಕದ್ದು. ತಪ್ಪು ಅಥವಾ ಸುಳ್ಳು ಮಾಹಿತಿಗಳನ್ನು ನೀಡಿ ಅರ್ಜಿ ಸಲ್ಲಿಸಿದಲ್ಲಿ ಯಾವುದೇ ಸಮಯದಲ್ಲಿಯಾದರೂ ಅಭ್ಯರ್ಥಿತನವು ರದ್ದುಗೊಳ್ಳುವುದು ಹಾಗೂ ನಿಯಾಮಾನುಸಾರ ಅಂತಹವರ ವಿರುದ್ಧ ಮಂಡಳಿಯು ಕಾನೂನಿನನ್ವಯ ಸೂಕ್ತ ಕ್ರಮ ಕೈಗೊಳ್ಳುವುದು.

2.5 ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಮೊದಲು ಅರ್ಜಿ ಶುಲ್ಕವನ್ನು ಪಾವತಿಸಿ, ಪಾವತಿ ದೃಢೀಕರಣವನ್ನು ಸಿದ್ದವಾಗಿಡಬೇಕು. ಮತ್ತು ಗೂಗಲ್ ಫಾರಂ ನಲ್ಲಿ ಅರ್ಜಿ ಶುಲ್ಕಕ್ಕೆ ಸಂಬಂಧಿಸಿದ ವಹಿವಾಟು ಐಡಿ (UTR No/Transaction No.) ಮತ್ತು ದಿನಾಂಕವನ್ನು ಕಡ್ಡಾಯವಾಗಿ ನಮೂದಿಸಲು ಸೂಚಿಸಲಾಗಿದೆ .

2.6 ಪಾವತಿಸಿದ ಅರ್ಜಿ ಶುಲ್ಕವನ್ನು ಯಾವುದೇ ಸಂದರ್ಭದಲ್ಲೂ ಮರುಪಾವತಿಸಲಾಗುವುದಿಲ್ಲ.

2.7 ಅಭ್ಯರ್ಥಿಗಳು ಅರ್ಜಿಯಲ್ಲಿ ನೀಡಿದ ಮಾಹಿತಿಯ ಸತ್ಯತೆಗೆ ಜವಾಬ್ದಾರರು. ಅಗತ್ಯ ದಾಖಲೆಗಳನ್ನು ಮಂಡಳಿಯು ಕರೆದಾಗ ಪ್ರಸ್ತುತ ಪಡಿಸಬೇಕು.

2.8 ಅಭ್ಯರ್ಥಿಗಳು ಎಚ್ಚರಿಕೆಯಿಂದ ಅಧಿಸೂಚನೆಯನ್ನು ಓದಿ ಅರ್ಥೈಸಿಕೊಂಡು ಅರ್ಜಿ ಸಲ್ಲಿಸಲು ಸೂಚಿಸಲಾಗಿದೆ

2.9 ನಿಗದಿತ ಶೈಕ್ಷಣಿಕ ಅರ್ಹತೆಯ ಜೊತೆಗೆ ಈ ಮೇಲ್ಕಂಡ ಅರ್ಹತೆಗಳನ್ನು ಹೊಂದಿರುವ ಅಭ್ಯರ್ಥಿಗಳು ನೇಮಕಾತಿಗಾಗಿ ಅರ್ಜಿ ಸಲ್ಲಿಸಲು ಮಾತ್ರ ಅರ್ಹತೆಯನ್ನು ಹೊಂದಿರುತ್ತಾರೆ ಹಾಗೂ ಸ್ವಯಂಚಾಲಿತವಾಗಿ ಸಂದರ್ಶನಕ್ಕೆ ಅರ್ಹರಾಗುವುದಿಲ್ಲ.

For more job news visit : www.kpscvaani.com

2.10 ಮಂಡಳಿಯ ವೆಬ್ ಸೈಟ್ (https://kscst.karnataka.gov.in/ ಅಥವಾ https://www.kscst.org.in/ ನಲ್ಲಿ ತೋರಿಸುವ ಗೂಗಲ್ ಫಾರಂ ಲಿಂಕ್ ಅನ್ನು ಆಯ್ಕೆ ಮಾಡಿ ಆನ್ ಲೈನ್ ಮುಖಾಂತರ ಅರ್ಜಿಯನ್ನು ಭರ್ತಿ ಮಾಡಬೇಕು. ಒಮ್ಮೆ ಸಲ್ಲಿಸಿದ ಅರ್ಜಿಯಲ್ಲಿನ ಯಾವುದೇ ಮಾಹಿತಿಯನ್ನು ಯಾವುದೇ ಹಂತದಲ್ಲಿ ಬದಲಾವಣೆ/ತಿದ್ದುಪಡಿ ಮಾಡಲು ಅವಕಾಶವಿರುವುದಿಲ್ಲ. ಆದ್ದರಿಂದ ಅಭ್ಯರ್ಥಿಗಳು ಎಚ್ಚರಿಕೆಯಿಂದ ಅಧಿಸೂಚನೆಯನ್ನು ಓದಿ ಅರ್ಥೈಸಿಕೊಂಡು ಅರ್ಜಿ ಸಲ್ಲಿಸಲು ಸೂಚಿಸಲಾಗಿದೆ.

## 3. ಇತರ ವಿವರಗಳು:

3.1 ಒಟ್ಟು ವೇತನ:

ಒಟ್ಟು ವೇತನವು ಮಂಡಳಿಯ ಸೇವಾ ನಿಯಮಗಳ ಪ್ರಕಾರ ನಿಗದಿಪಡಿಸಲಾದ ಮೂಲ ವೇತನ, ಭತ್ಯೆಗಳು (**DA, HRA, CCA** ಇತ್ಯಾದಿ) ಸೇರಿದಂತೆ ಇರುತ್ತದೆ.

3.2 ಅಭ್ಯರ್ಥಿಗಳು ಎಸ್.ಎಸ್.ಎಲ್.ಸಿ ಅಥವಾ ಅದಕ್ಕಿಂತ ಹೆಚ್ಚಿನ ವಿದ್ಯಾರ್ಹತೆಯಲ್ಲಿ ಕನ್ನಡವನ್ನು ಪ್ರಥಮ ಅಥವಾ ದ್ವಿತೀಯ ಅಥವಾ ತೃತೀಯ ಭಾಷೆಯಾಗಿ ಆರಿಸಿಕೊಂಡು ಉತ್ತೀರ್ಣರಾಗಿರಬೇಕು. ಕನ್ನಡವನ್ನು ಓದುವ, ಬರೆಯುವ ಮತ್ತು ಮಾತನಾಡುವ ಕೌಶಲ್ಯ ಕಡ್ಡಾಯ.

3.3 ಅರ್ಜಿ ಸಲ್ಲಿಸುವ ಕೊನೆಯ ದಿನಾಂಕವಾದ **ಜೂನ್ 09, 2025** ರಂದು ಅಭ್ಯರ್ಥಿಯ ವಯಸ್ಸು 50 ವರ್ಷಗಳನ್ನು ಮೀರಬಾರದು.

3.4 ಗೂಗಲ್ ಫಾರ್ಮ್ (GOOGLE FORM) ಮೂಲಕ ಅರ್ಜಿ ಸ್ವೀಕೃತಿ ಕಾಲಮಿತಿ:

| | |
|---|---|
| ಆನ್ ಲೈನ್ ಗೂಗಲ್ ಫಾರಂ ಮುಖಾಂತರ ಅರ್ಜಿ ಸಲ್ಲಿಸಲು ಪ್ರಾರಂಭಿಕ ದಿನಾಂಕ | **09-05-2025 ರ ಬೆಳಿಗ್ಗೆ 11.00 ರಿಂದ** |
| ಆನ್ ಲೈನ್ ಗೂಗಲ್ ಫಾರಂ ಮುಖಾಂತರ ಅರ್ಜಿ ಸಲ್ಲಿಸಲು ಹಾಗೂ ಶುಲ್ಕವನ್ನು ಪಾವತಿ ಮಾಡಲು ಕೊನೆಯ ದಿನಾಂಕ | **09-06-2025 ರ ರಾತ್ರಿ 11.55 ರ ವರೆಗೆ** |

## 4. ಅರ್ಜಿ ಸಲ್ಲಿಸುವುದು ವಿಧಾನ:

4.1 ಅರ್ಜಿಗಳನ್ನು ಆನ್‌ಲೈನ್ ಗೂಗಲ್ ಫಾರಂ ಮುಖಾಂತರ ಮಾತ್ರ ಸ್ವೀಕರಿಸಲಾಗುವುದು. ಅಭ್ಯರ್ಥಿಗಳು ಕೆ.ಎಸ್.ಸಿ.ಎಸ್.ಟಿ ವೆಬ್‌ಸೈಟ್ (https://kscst.karnataka.gov.in/ ಅಥವಾ https://www.kscst.org.in/) ನಲ್ಲಿರುವ ಗೂಗಲ್ ಫಾರ್ಮ್ ಅನ್ನು ಭರ್ತಿ ಮಾಡಬೇಕು.

4.2 ಅರ್ಹ ಅಭ್ಯರ್ಥಿಗಳು ಕೆ.ಎಸ್.ಸಿ.ಎಸ್.ಟಿ ವೆಬ್‌ಸೈಟ್‌ಗೆ ಭೇಟಿ ನೀಡಿ ಅರ್ಜಿ ಪ್ರಕ್ರಿಯೆಯನ್ನು ಪ್ರಾರಂಭಿಸಬಹುದು.

4.3 ಅರ್ಜಿ ಸಲ್ಲಿಸುವ ಮೊದಲು, ಅಭ್ಯರ್ಥಿಗಳು ಅಗತ್ಯ ಶುಲ್ಕವನ್ನು ಆನ್‌ಲೈನ್‌ನಲ್ಲಿ ಪಾವತಿಸಿ, ಪಾವತಿ ದೃಢೀಕರಣವನ್ನು ಸಿದ್ಧವಾಗಿಡಬೇಕು.

For more job news visit : www.kpscvaani.com

4.4 ಅಭ್ಯರ್ಥಿಗಳು ತಮ್ಮ ಇತ್ತೀಚಿನ ಪಾಸ್‌ಪೋರ್ಟ್ ಗಾತ್ರದ ಫೋಟೋ, ಸಹಿ ಮತ್ತು ಅಗತ್ಯ ದಾಖಲೆಗಳ ಸ್ಕ್ಯಾನ್ ಮಾಡಿದ ಪ್ರತಿಗಳನ್ನು ಅಪ್ಲೋಡ್ ಮಾಡಬೇಕು.

4.5 ಶುಲ್ಕ ಪಾವತಿಸದಿರುವುದು ಅಥವಾ ಅಗತ್ಯ ದಾಖಲೆಗಳನ್ನು ಸರಿಯಾಗಿ ಸಲ್ಲಿಸದಿದ್ದರೆ ಅರ್ಜಿಯನ್ನು ತಿರಸ್ಕರಿಸಲಾಗುತ್ತದೆ.

4.6 ಅರ್ಜಿದಾರರು ತಮ್ಮ ಸರಿಯಾದ ಇಮೇಲ್ ಐಡಿಯನ್ನು ಅರ್ಜಿಯಲ್ಲಿ ನೀಡಬೇಕು.

4.7 **ಆನ್ಲೈನ್ ಗೂಗಲ್ ಫಾರಂ ನಲ್ಲಿ ಅಲ್ಲದೆ ಬೇರಾವುದೇ ವಿಧಾನದಲ್ಲಿ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.**

**ಗೂಗಲ್ ಫಾರ್ಮ್ ಅನ್ನು ಭರ್ತಿ ಮಾಡುವಾಗ ತಾಂತ್ರಿಕ ಸಮಸ್ಯೆಗಳನ್ನು ಎದುರಿಸಿದರೆ, 080-23341652 (ಕಚೇರಿ ಸಮಯದಲ್ಲಿ ಬೆಳಿಗ್ಗೆ 09 ರಿಂದ ಸಾಯಂಕಾಲ 05.30) ಗೆ ಕರೆ ಮಾಡಿ ಸಹಾಯ ಪಡೆಯಿರಿ.**

**5. <u>ಆಯ್ಕೆ ಪ್ರಕ್ರಿಯೆ.</u>**

5.1 ನಿಗದಿಪಡಿಸಿದ ಅರ್ಹತೆ ಮತ್ತು ಸೇವಾ ಅನುಭವ ಮತ್ತು ಮಾನದಂಡವು ಕನಿಷ್ಠ ಅವಶ್ಯಕತೆಯಾಗಿದೆ ಇವುಗಳನ್ನು ಪೂರೈಸಿದ ಎಲ್ಲಾ ಅಭ್ಯರ್ಥಿಗಳು ಸ್ವಯಂಚಾಲಿತವಾಗಿ ಸಂದರ್ಶನಕ್ಕೆ ಅರ್ಹರಾಗುವುದಿಲ್ಲ.

5.2 ಗೂಗಲ್ ಫಾರಂ ಮೂಲಕ ಸ್ವೀಕೃತ ಅರ್ಜಿಗಳನ್ನು ಪರಿಶೀಲಿಸಿ, ಸಂದರ್ಶನಕ್ಕೆ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ.

5.3 ಸಂದರ್ಶನಕ್ಕೆ ಆಯ್ಕೆಯಾದ ಅಭ್ಯರ್ಥಿಗಳಿಗೆ ಸಂದರ್ಶನದ ವಿವರಗಳನ್ನು ಇ-ಮೇಲ್ ಮೂಲಕ ಅಥವಾ ಮಂಡಳಿಯ ಅಂತರ್ಜಾಲದಲ್ಲಿ ಮಾತ್ರ ತಿಳಿಸಲಾಗುತ್ತದೆ.

5.4 ಅಭ್ಯರ್ಥಿಗಳು ಸಂದರ್ಶನದಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಹುದ್ದೆಗೆ ಆಯ್ಕೆ ಮಾಡಲಾಗುವುದು.

**6. <u>ನಿರಾಕ್ಷೇಪಣಾ ಪ್ರಮಾಣಪತ್ರ (NO OBJECTION CERTIFICATE):</u>**

ಕೇಂದ್ರ / ರಾಜ್ಯ ಸರ್ಕಾರ / ಪಿ.ಎಸ್.ಯು / ಸ್ವಾಯತ್ತ ಸಂಸ್ಥೆಗಳಲ್ಲಿ ಸೇವೆಯಲ್ಲಿರುವ /ಸೇವೆ ಸಲ್ಲಿಸಿದ ಅಭ್ಯರ್ಥಿಗಳು ನೇಮಕಾತಿ ಪ್ರಾಧಿಕಾರಿಗಳಿಂದ ನಿಗದಿತ ನಮೂನೆಯಲ್ಲಿ ನಿರಾಕ್ಷೇಪಣಾ ಪ್ರಮಾಣಪತ್ರ /ಅನುಮತಿಯನ್ನು/ಸೇವಾ ಪ್ರಮಾಣ ಪತ್ರವನ್ನು ಹಾಜರುಪಡಿಸಬೇಕು ಇತರ ಅಭ್ಯರ್ಥಿಗಳು ಬೇಡಿಕೆಯ ಮೇರೆಗೆ ನಿರಾಕ್ಷೇಪಣಾ ಪ್ರಮಾಣಪತ್ರವನ್ನು ಹಾಜರುಪಡಿಸಬೇಕಾಗುತ್ತದೆ.

**7. ಶುಲ್ಕ: ಆನ್ ಲೈನ್ ಮೂಲಕ ಶುಲ್ಕ ಪಾವತಿಸಬಹುದಾಗಿರುತ್ತದೆ.**

| ವಿವರಗಳು | ಶುಲ್ಕ | |
|---|---|---|
| ಸಾಮಾನ್ಯ ಅರ್ಹತೆ ಮತ್ತು ಇತರೆ ಪ್ರವರ್ಗಗಳು (ಪ್ರವರ್ಗ - 1, ಪ್ರವರ್ಗ-2A/2B/3A/3B) | ರೂ.300 | ಪಾವತಿಸಿದ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ |

For more job news visit : www.kpscvaani.com

| | | |
|---|---|---|
| ಪರಿಶಿಷ್ಟ ಜಾತಿ (SC), ಪರಿಶಿಷ್ಟ ಪಂಗಡ (ST), ಮತ್ತು ಮಾಜಿ ಸೈನಿಕ, ಅಂಗವಿಕಲ ಅಭ್ಯರ್ಥಿಗಳು | ರೂ.50 | |

ಅರ್ಜಿ ಶುಲ್ಕವನ್ನು ಕೆನರಾ ಬ್ಯಾಂಕ್‌ನಲ್ಲಿರುವ ಕೆ.ಎಸ್.ಸಿ.ಎಸ್.ಟಿ. ಬ್ಯಾಂಕ್ ಖಾತೆಗೆ ವಹಿವಾಟಿನ ಮೂಲಕ ಪಾವತಿಸಬೇಕು. ಯುಟಿಆರ್ ಸಂಖ್ಯೆ (UTR NO./Transaction ID) ಆನ್‌ಲೈನ್ ಅರ್ಜಿಯಲ್ಲಿ ನಮೂದಿಸಬೇಕು.

**ಬ್ಯಾಂಕ್ ವಿವರಗಳು ಈ ಕೆಳಗಿನಂತಿವೆ:**

ಖಾತೆದಾರರ ಹೆಸರು: ಕಾರ್ಯದರ್ಶಿ, ಕೆ.ಎಸ್.ಸಿ.ಎಸ್.ಟಿ.
ಬ್ಯಾಂಕ್ ಹೆಸರು: ಕೆನರಾ ಬ್ಯಾಂಕ್.
ಶಾಖೆ: ಭಾರತೀಯ ವಿಜ್ಞಾನ ಸಂಸ್ಥೆ ಆವರಣ
ಬೆಂಗಳೂರು-560 012.
IFSC ಕೋಡ್: CNRB0000683,
ಬ್ಯಾಂಕ್ ಖಾತೆ ಸಂಖ್ಯೆ: 0683201000024.

7.1 ಅಂಗವಿಕಲ(PWD) , ಎಸ್ಸಿ(SC)/ಎಸ್ಟಿ(ST) ಮತ್ತು ಮಾಜಿ ಸೈನಿಕ ಅಭ್ಯರ್ಥಿಗಳಿಗೆ ಅರ್ಜಿ ಶುಲ್ಕದಿಂದ ವಿನಾಯಿತಿ ನೀಡಲಾಗಿದೆ. ಆದಾಗ್ಯೂ, ಈ ಅಭ್ಯರ್ಥಿಗಳು ಪ್ರೊಸೆಸಿಂಗ್ ಶುಲ್ಕವಾಗಿ (Processing fee) ರೂ.50 / - ಗಳನ್ನು ಕಡ್ಡಾಯವಾಗಿ ಪಾವತಿಸಬೇಕಾಗುತ್ತದೆ.

7.2 ಅರ್ಜಿ ಶುಲ್ಕವನ್ನು ಮರುಪಾವತಿಸಲಾಗುವುದಿಲ್ಲ. ಬೇರೆ ಯಾವುದೇ ಪಾವತಿ ವಿಧಾನವನ್ನು ಸ್ವೀಕರಿಸಲಾಗುವುದಿಲ್ಲ ಮತ್ತು ಬೇರೆ ಯಾವುದೇ ರೂಪದಲ್ಲಿ ಮಾಡಿದ ಪಾವತಿಯನ್ನು ಹಿಂದಿರುಗಿಸಲಾಗುವುದಿಲ್ಲ.

7.3 ವಿಕಲ ಚೇತನ ಅಭ್ಯರ್ಥಿಗಳು ಶೇ.40 ಕ್ಕಿಂತ ಹೆಚ್ಚು ಅಂಗವಿಕಲತೆ ಹೊಂದಿರುವವರು ಮತ್ತು ಅದಕ್ಕೆ ಸಂಬಂಧಿಸಿದಂತೆ ಜಿಲ್ಲಾ ವೈದ್ಯಾಧಿಕಾರಿಗಳಿಂದ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.

7.4 ಪರಿಶಿಷ್ಟ ಜಾತಿ (SC), ಪರಿಶಿಷ್ಟ ಪಂಗಡ (ST) ಅಭ್ಯರ್ಥಿಗಳು ಶುಲ್ಕ ವಿನಾಯಿತಿ ಕೋರುವುದಾದರೆ ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ಜಾತಿ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.

7.5 ಶುಲ್ಕ ವಿನಾಯಿತಿ ಕೋರುವ ಮಾಜಿ ಸೈನಿಕ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.

7.6 ಶುಲ್ಕ /ಪ್ರೊಸೆಸಿಂಗ್ ಫಿ (Processing fee) ಪಾವತಿ ಮಾಡಿ UTR No./Transaction No. ಅನ್ನು ಗೂಗಲ್ ಫಾರಂ ನಲ್ಲಿ ನಮೂದು ಮಾಡದೆ ಇರುವ ಅರ್ಜಿಗಳು ಹಾಗೂ ಶುಲ್ಕ ವಿನಾಯಿತಿ ಕೋರಿ ಅದಕ್ಕೆ ಪೋಷಕ ದಾಖಲೆಗಳನ್ನು UPLOAD ಮಾಡದ ಅರ್ಜಿಗಳು ತಿರಸ್ಕೃತಗೊಳ್ಳುತ್ತವೆ.

## 8. <u>ಅರ್ಹತಾ ಷರತ್ತುಗಳು:</u>

8.1. ಭಾರತೀಯ ನಾಗರೀಕನಾಗಿರತಕ್ಕದ್ದು

8.2. ಒಬ್ಬ ಜೀವಂತ ಪತ್ನಿಗಿಂತ ಹೆಚ್ಚು ಮಂದಿ ಪತ್ನಿಯರನ್ನು ಹೊಂದಿರುವ ಪುರುಷ ಅಭ್ಯರ್ಥಿ

For more job news visit : www.kpscvaani.com

ಮತ್ತು ಈಗಾಗಲೇ ಇನ್ನೊಬ್ಬ ಹೆಂಡತಿ ಇರುವ ವ್ಯಕ್ತಿಯನ್ನು ಮದುವೆಯಾಗಿರುವ ಮಹಿಳಾ ಅಭ್ಯರ್ಥಿಯು ಮಂಡಳಿಯಿಂದ ಪೂರ್ವಾನುಮತಿಯನ್ನು ಪಡೆಯದೇ ನೇಮಕಾತಿಗೆ ಅರ್ಹರಾಗುವುದಿಲ್ಲ.

8.3. ಅಭ್ಯರ್ಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿರಬೇಕು ಮತ್ತು ಅವರ ನೇಮಕಾತಿಯು ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟು ಮಾಡುವ ಸಂಭವ ಇರುವ ಯಾವುದೇ ದೈಹಿಕ ನ್ಯೂನತೆಯಿಂದ ಮುಕ್ತರಾಗಿರಬೇಕು.

8.4. ದೈಹಿಕವಾಗಿ ಅನರ್ಹರಾಗಿದ್ದಾರೆಂಬುದಾಗಿ ವೈದ್ಯಕೀಯ ಮಂಡಳಿಯ ವರದಿಯ ಮೇಲೆ ಅನರ್ಹರೆಂಬುದಾಗಿ ತಿರಸ್ಕರಿಸುವ ಪೂರ್ಣ ವಿವೇಚನೆಯನ್ನು ಮಂಡಳಿಯು ಕಾಯ್ದಿರಿಸಿಕೊಂಡಿದೆ ಮತ್ತು ಮಂಡಳಿಯ ವಿವೇಚನೆಯು ಯಾವುದೇ ವಿಧದಲ್ಲೂ ಈ ನಿಯಮಗಳ ಮೂಲಕ ಸೀಮಿತವಾಗಿರುವುದಿಲ್ಲ.

8.5. ಕೇಂದ್ರ ಅಥವಾ ಕರ್ನಾಟಕ ಅಥವಾ ಇತರೆ ರಾಜ್ಯದ ಲೋಕ ಸೇವಾ ಆಯೋಗ ಅಥವಾ ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಯಾವುದೇ ವಿಶ್ವವಿದ್ಯಾನಿಲಯಗಳಿಂದ ನಡೆಸಲಾಗುವ ಪರೀಕ್ಷೆಗಳಿಂದ ಅಥವಾ ನೇಮಕಾತಿಗಳಿಂದ ಖಾಯಂ ಆಗಿ ಡಿಬಾರ್ ಆದ ವ್ಯಕ್ತಿಗಳು ನೇಮಕಾತಿಗೆ ಅರ್ಹರಾಗುವುದಿಲ್ಲ.

8.6. ಯಾವುದೇ ನೈತಿಕ ಪರಿಭಾಷೆಗೆ ಶಿಕ್ಷೆಗೆ ಒಳಪಟ್ಟ ವ್ಯಕ್ತಿ ಅಥವಾ ಕೇಂದ್ರ ಅಥವಾ ಕರ್ನಾಟಕ ಅಥವಾ ಇತರೆ ರಾಜ್ಯದ ಲೋಕಸೇವಾ ಆಯೋಗ, ಪರೀಕ್ಷಾ ಪ್ರಾಧಿಕಾರ ಅಥವಾ ಯಾವುದೇ ವಿಶ್ವವಿದ್ಯಾನಿಲಯಗಳಿಂದ ನಡೆಸಲಾಗುವ ಪರೀಕ್ಷೆಗಳಿಂದ, ಅಥವಾ ನೇಮಕಾತಿಗಳಿಂದ ತಾತ್ಕಾಲಿಕವಾಗಿ ಡಿಬಾರ್ ಆದ ಅಥವಾ ಅನರ್ಹಗೊಂಡ ವ್ಯಕ್ತಿಯು, ಎಲ್ಲಾ ಸಂದರ್ಭಗಳನ್ನು ಮರು ಪರಿಶೀಲಿಸಿ ಅವರು ನೇಮಕಾತಿಗೆ ಅರ್ಹರೆಂದು ಮಂಡಳಿಯು ಪರಿಗಣಿಸುವವರೆಗೂ ನೇಮಕಾತಿಗೆ ಅರ್ಹರಾಗುವುದಿಲ್ಲ.

8.7. ಕೆ.ಎಸ್.ಸಿ.ಎಸ್.ಟಿ ಈ ಕೆಳಕಂಡ ಹಕ್ಕುಗಳನ್ನು ಕಾಯ್ದಿರಿಸಿದೆ:

ಎ. ಆಯ್ಕೆಗಾಗಿ ಲಿಖಿತ ಪರೀಕ್ಷೆ ಮತ್ತು / ಅಥವಾ ಕೌಶಲ್ಯ ಪರೀಕ್ಷೆ ಮತ್ತು / ಅಥವಾ ವೈಯಕ್ತಿಕ ಸಂದರ್ಶನವನ್ನು ನಡೆಸಿ, ಸಂದರ್ಭಗಳು ಏನೇ ಇರಲಿ;

ಬಿ. ಮಂಡಳಿಯು ಯಾವುದೇ ಹಂತದಲ್ಲಿ ಯಾವುದೇ ಕಾರಣಗಳನ್ನು ನೀಡದೆ ಈ ನೇಮಕಾತಿ ಪ್ರಕ್ರಿಯೆಯನ್ನು ಬದಲಾಯಿಸುವ ಅಥವಾ ರದ್ದುಗೊಳಿಸುವ ಹಕ್ಕನ್ನು ಹೊಂದಿದೆ.

ಸಿ. ಖಾಲಿ ಹುದ್ದೆಗಳ ಸಂಖ್ಯೆಯನ್ನು ಹೆಚ್ಚಿಸುವುದು ಅಥವಾ ಕಡಿಮೆ ಮಾಡುವ ಹಕ್ಕು ಮಂಡಳಿಯದ್ದಾಗಿದೆ.

## 9. <u>ವಿಶೇಷ ಸೂಚನೆಗಳು:</u>

9.1 ಅಭ್ಯರ್ಥಿಗಳು ಗೂಗಲ್ ಫಾರಂ ನಲ್ಲಿ ಎಲ್ಲಾ ಕಡ್ಡಾಯ ಕ್ಷೇತ್ರಗಳನ್ನು ಸಂಪೂರ್ಣವಾಗಿ ಭರ್ತಿ ಮಾಡಬೇಕು ಮತ್ತು ಅಗತ್ಯ ದಾಖಲೆಗಳ ಸ್ಕ್ಯಾನ್ ಮಾಡಿದ ಪ್ರತಿಗಳನ್ನು ಅಪ್‌ಲೋಡ್ ಮಾಡಬೇಕು. ಇದರಲ್ಲಿ ಹುಟ್ಟಿದ ದಿನಾಂಕ, ಶೈಕ್ಷಣಿಕ ಅರ್ಹತೆಗಳಿಗೆ, ಸೇವಾನುಭವಕ್ಕೆ

For more job news visit : www.kpscvaani.com

ಸಂಬಂಧಿಸಿದ ಪ್ರಮಾಣಪತ್ರಗಳು ಮತ್ತು ಎಸ್‌ಸಿ/ಎಸ್‌ಟಿ ಅಭ್ಯರ್ಥಿಗಳಿಗೆ ಜಾತಿ ಪ್ರಮಾಣಪತ್ರ (ಅರ್ಜಿ ಶುಲ್ಕದಿಂದ ವಿನಾಯಿತಿ ಪಡೆಯಲು ಅನ್ವಯಿಸಿದರೆ) ಸೇರಿವೆ. ಒಮ್ಮೆ ಸಲ್ಲಿಸಿದ ಮಾಹಿತಿಯನ್ನು ಬದಲಾಯಿಸಲು ಅವಕಾಶವಿರುವುದಿಲ್ಲ.

9.2 ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದಂದು ಅಭ್ಯರ್ಥಿಯು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ವಯಸ್ಸಿನ ಮಿತಿ, ಶೈಕ್ಷಣಿಕ ಅರ್ಹತೆ ಮತ್ತು ಸೇವಾನುಭವದ ಮಾನದಂಡಗಳನ್ನು ಪೂರೈಸಿರಬೇಕು.

9.3 ಸೇವಾ ಅನುಭವ ಪ್ರಮಾಣಪತ್ರವು ಸಂಬಂಧಿತ ಸಂಸ್ಥೆಯ ಅಧಿಕೃತ ಲೆಟರ್‌ಹೆಡ್‌ನಲ್ಲಿರಬೇಕು ಮತ್ತು ಅಭ್ಯರ್ಥಿಯ ಹೆಸರು, ನೇಮಕಾತಿ ದಿನಾಂಕ, ನಿರ್ಗಮನ ದಿನಾಂಕ, ಹುದ್ದೆ, ಜವಾಬ್ದಾರಿಗಳು ಮತ್ತು ಪಡೆದ ವೇತನದಂತಹ ನಿಖರವಾದ ಮಾಹಿತಿಯನ್ನು ಒಳಗೊಂಡಿರಬೇಕು.

9.4 ನೇಮಕಾತಿ ಪ್ರಕ್ರಿಯೆಗೆ ಸಂಬಂಧಿಸಿದ ಯಾವುದೇ ಬದಲಾವಣೆಗಳು ಅಥವಾ ಸ್ಪಷ್ಟೀಕರಣಗಳನ್ನು ಮಂಡಳಿಯ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಅಭ್ಯರ್ಥಿಗಳು ನಿಯಮಿತವಾಗಿ ವೆಬ್‌ಸೈಟ್ ಅನ್ನು ಪರಿಶೀಲಿಸಿ ಇತ್ತೀಚಿನ ಮಾಹಿತಿಯನ್ನು ಪಡೆಯುವಂತೆ ಸೂಚಿಸಲಾಗಿದೆ.

9.5 ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಮೊದಲು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ಶೈಕ್ಷಣಿಕ ಅರ್ಹತೆ ಮತ್ತು ಅನುಭವದ ಮಾನದಂಡಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಬೇಕು. ಎಲ್ಲಾ ಶೈಕ್ಷಣಿಕ ಅರ್ಹತೆಗಳು ಮಾನ್ಯತೆ ಪಡೆದ ವಿಶ್ವವಿದ್ಯಾಲಯ/ ಮಂಡಳಿಯಿಂದ ಪಡೆದಿರಬೇಕು.

9.6 ಸೂಚಿಸಲಾದ ಕನಿಷ್ಠ ಅರ್ಹತೆಗಳು ಮತ್ತು ಅನುಭವವು ಅರ್ಜಿಯನ್ನು ಪರಿಗಣಿಸಲು ಆಧಾರವಾಗಿದ್ದರೂ, ಇವು ಮಾತ್ರ ಸಂದರ್ಶನಕ್ಕೆ ಆಹ್ವಾನವನ್ನು ಖಚಿತಪಡಿಸುವುದಿಲ್ಲ. ವಿಶೇಷವಾಗಿ ಅರ್ಜಿಗಳ ಸಂಖ್ಯೆ ಹೆಚ್ಚಿದಾಗ, ಸಂಸ್ಥೆಯು ಎಲ್ಲಾ ಅರ್ಜಿದಾರರನ್ನು ಸಂದರ್ಶಿಸಲು ಸಾಧ್ಯವಾಗುವುದಿಲ್ಲ. ಹೀಗಾಗಿ, ಕೆ.ಎಸ್.ಸಿ.ಎಸ್.ಟಿ ಸಂದರ್ಶನಕ್ಕೆ ಕರೆಯುವ ಅರ್ಜಿದಾರರ ಸಂಖ್ಯೆಯನ್ನು ಸಮಂಜಸವಾದ ಮಿತಿಗೆ ನಿರ್ಬಂಧಿಸಬಹುದು. ಈ ನಿರ್ಧಾರವು ಅಭ್ಯರ್ಥಿಯ ಶೈಕ್ಷಣಿಕ ಹಿನ್ನೆಲೆ, ಸೇವಾ ಅನುಭವ ಮತ್ತು ಜಾಹೀರಾತಿನಲ್ಲಿ ಉಲ್ಲೇಖಿಸಿದ ಹೆಚ್ಚುವರಿ ಅರ್ಹತೆಗಳ ಆಧಾರದ ಮೇಲೆ ತೆಗೆದುಕೊಳ್ಳಲಾಗುತ್ತದೆ. ಆದ್ದರಿಂದ, ಅಭ್ಯರ್ಥಿಗಳು ತಮ್ಮ ಎಲ್ಲಾ ಅರ್ಹತೆಗಳು ಮತ್ತು ಅನುಭವಗಳನ್ನು ಸಂಪೂರ್ಣವಾಗಿ ವಿವರಿಸುವುದು ಮುಖ್ಯ. ನಿಗದಿತ ಕನಿಷ್ಠ ಅರ್ಹತೆಗಳ ಜೊತೆಗೆ, ಹೆಚ್ಚುವರಿ ಅರ್ಹತೆಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸುವುದು ಅಗತ್ಯ.

9.7 ಗ್ರಾಮೀಣ / ಮಾಜಿ ಸೈನಿಕರು / ಮಹಿಳೆಯರು / ದೈಹಿಕ ಅಂಗವಿಕಲ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಪ್ರೋತ್ಸಾಹಿಸಲಾಗಿದೆ.

9.8 ನೇಮಕಗೊಂಡ ಅಧಿಕಾರಿಯು ಕರ್ನಾಟಕ ರಾಜ್ಯದ ಯಾವುದೇ ಸ್ಥಳಕ್ಕೆ ವರ್ಗಾವಣೆಗೊಳ್ಳಲು ಜವಾಬ್ದಾರರಾಗಿರುತ್ತಾರೆ.

For more job news visit : www.kpscvaani.com

9.9 ಕೇವಲ ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸುವುದು, ಸಂದರ್ಶನಕ್ಕೆ ಹಾಜರಾಗುವುದು ಮತ್ತು ಸಂದರ್ಶನಕ್ಕೆ ಅರ್ಹತೆ ಪಡೆದ ಮಾತ್ರಕ್ಕೆ ಅಭ್ಯರ್ಥಿಗಳಿಗೆ ಮೇಲಿನ ಹುದ್ದೆಗೆ ನೇಮಕಾತಿಗೆ ಯಾವುದೇ ಹಕ್ಕನ್ನು ನೀಡುವುದಿಲ್ಲ, ನೇಮಕಾತಿಯು ಮಂಡಳಿಯು ನಿಗದಿಪಡಿಸಬಹುದಾದ ಅರ್ಹತಾ ಮಾನದಂಡಗಳಿಗೆ ಒಳಪಟ್ಟಿರುತ್ತದೆ.

9.10 ಮಂಡಳಿಯು ಅಭ್ಯರ್ಥಿಗಳೊಂದಿಗೆ ಯಾವುದೇ ಪತ್ರ ವ್ಯವಹಾರವನ್ನು ನೆಡೆಸುವುದಿಲ್ಲ ಮತ್ತು ಸಂದರ್ಶನಕ್ಕೆ ಕರೆಯದ ಕಾರಣಗಳ ಬಗ್ಗೆ ಪ್ರಶ್ನಿಸಲು ಅಭ್ಯರ್ಥಿಗಳಿಗೆ ಅವಕಾಶವಿರುವುದಿಲ್ಲ

9.11 ಅಭ್ಯರ್ಥಿಗಳು ಸಂದರ್ಶನಕ್ಕೆ ಹಾಜರಾಗಲು ಯಾವುದೇ ಪ್ರಯಾಣ ಭತ್ಯೆ/ ದಿನ ಭತ್ಯೆ ನೀಡಲಾಗುವುದಿಲ್ಲ.

9.12 ಸಂದರ್ಶನಕ್ಕೆ ಅರ್ಹತೆ ಪಡೆದ ಅಭ್ಯರ್ಥಿಗಳು ತಮ್ಮ ಅರ್ಜಿಯಲ್ಲಿ ಸಲ್ಲಿಸಿದ ಎಲ್ಲಾ ಮೂಲ ದಾಖಲೆಗಳನ್ನು ಸಂದರ್ಶನದ ಸಮಯದಲ್ಲಿ ಹಾಜರುಪಡಿಸಬೇಕಾಗುತ್ತದೆ.

9.13 ಯಾವುದೇ ರೀತಿಯ ಪ್ರಚಾರ ಅಥವಾ ಪ್ರಭಾವ ಬೀರುವುದು ಹುದ್ದೆಗೆ ಅರ್ಹತೆಯನ್ನು ರದ್ದುಗೊಳಿಸುತ್ತದೆ. ಈ ನಿಯಮವು ಕೆಸಿಎಸ್ (KCS) ನೇಮಕಾತಿ ನಿಯಮಗಳಿಗೆ ಅನುಸಾರವಾಗಿದೆ

9.14 ನೇಮಕಾತಿಗೆ ಸಂಬಂಧಿಸಿದ ಯಾವುದೇ ವಿವಾದ ಉಂಟಾದಲ್ಲಿ, ಕೆ.ಎಸ್.ಸಿ.ಎಸ್.ಟಿ ಯ ನಿರ್ಧಾರ ಅಂತಿಮವಾಗಿರುತ್ತದೆ.

9.15 ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಈ ಕೆಳಕಂಡ ಪೂರಕ ದಾಖಲೆಗಳನ್ನು ಗೂಗಲ್ ಫಾರಂ ನಲ್ಲಿ ಅಪ್ಲೋಡ್ ಮಾಡಲು ಸೂಚಿಸಲಾಗಿದೆ

ಎ. ಅಭ್ಯರ್ಥಿಯು ಇತ್ತೀಚಿನ ಪಾಸ್ ಪೋರ್ಟ್ ಅಳತೆಯ ಭಾವಚಿತ್ರವನ್ನು ಹಾಗೂ ಕಪ್ಪು ಶಾಹಿಯ ಸ್ಕೆಚ್/ಮಾರ್ಕರ್ ಪೆನ್ನಲ್ಲಿ ಮಾಡಿದ ಸಹಿಯನ್ನು ಸ್ಕ್ಯಾನ್ ಮಾಡಿ ಅರ್ಜಿಗೆ **UPLOAD** ಮಾಡಬೇಕು. ಭಾವಚಿತ್ರ ಹಾಗೂ ಸಹಿಯನ್ನು **UPLOAD** ಮಾಡದ ಅರ್ಜಿಗಳು ತಿರಸ್ಕೃತಗೊಳ್ಳುತ್ತವೆ.

ಬಿ. ಎಸ್ ಎಸ್ ಎಲ್ ಸಿ ಅಂಕಪಟ್ಟಿ ಅಥವಾ ಹುಟ್ಟಿದ ದಿನಾಂಕದ ಜನನ ಪ್ರಮಾಣಪತ್ರ.

ಸಿ. ಅರ್ಹತೆಯನ್ನು ಬೆಂಬಲಿಸುವ ಅಂಕಪಟ್ಟಿಗಳು ಮತ್ತು ಪ್ರಮಾಣಪತ್ರಗಳು.

ಡಿ. ಅರ್ಜಿ ಶುಲ್ಕ ಪಾವತಿಸುವುದರಿಂದ ವಿನಾಯಿತಿಗಾಗಿ ಪ್ರಮಾಣಪತ್ರ.

ಇ. ಸೇವಾನುಭವ ಪ್ರಮಾಣಪತ್ರಗಳು.

ಎಫ್. ನಿರಾಕ್ಷೇಪಣಾ ಪ್ರಮಾಣಪತ್ರ (NOC) (ಕೇಂದ್ರ / ರಾಜ್ಯ ಸರ್ಕಾರ / ಪಿ.ಎಸ್.ಯು / ಸ್ವಾಯತ್ತ ಸಂಸ್ಥೆಗಳಲ್ಲಿ ಸೇವೆಯಲ್ಲಿರುವ)

9.16. ಸಂದರ್ಶನಕ್ಕೆ ಅರ್ಹರಾದ ಅಭ್ಯರ್ಥಿಗಳು ಅವರ ಸಂದರ್ಶನದ ಕರೆ ಪತ್ರ/ ಇಮೇಲ್ ನ ಪ್ರತಿ ಹಾಗೂ ಅವರ ಭಾವಚಿತ್ರವಿರುವ ಮೂಲ ಗುರುತಿನ ಚೀಟಿ (ಚುನಾವಣಾ ಐಡಿ/ಆಧಾರ್ ಕಾರ್ಡ್/ಡ್ರೈವಿಂಗ್ ಲೈಸನ್ಸ್/ ಪಾನ್ ಕಾರ್ಡ್/ಪಾಸ್ ಪೋರ್ಟ್ /ಸರ್ಕಾರೀ ನೌಕರರ ಐಡಿ) ಯನ್ನು ಸಂದರ್ಶನದ ಸಮಯದಲ್ಲಿ ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು. ತಪ್ಪಿದ್ದಲ್ಲಿ ಸಂದರ್ಶನಕ್ಕೆ ಪ್ರವೇಶವನ್ನು ನೀಡಲಾಗುವುದಿಲ್ಲ ಹಾಗೂ ಡೌನ್ಲೋಡ್ ಮಾಡಿರುವ ಗುರುತಿನ

For more job news visit : www.kpscvaani.com

ಚೀಟಿಗಳು/ಇತರೆ ಯಾವುದೇ ಗುರುತಿನ ಚೀಟಿಗಳು/ಕಲರ್ ಜೆರಾಕ್ಸ್ ಪ್ರತಿಗಳನ್ನು ಪರಿಗಣಿಸಲಾಗುವುದಿಲ್ಲ.

9.17. ಫೋಟೋ ಮತ್ತು ಸಹಿಯನ್ನು/ದಾಖಲೆಗಳನ್ನು ಅಪ್ಲೋಡ್ ಮಾಡದೆ ಇರುವ ಹಾಗೂ ಅಪೂರ್ಣವಾಗಿರುವ ದಾಖಲೆಗಳನ್ನು ಅಪ್ಲೋಡ್ ಮಾಡಿರುವ ಹಾಗೂ ಶುಲ್ಕ ಸಂದಾಯ ಮಾಡದ ಹಾಗೂ ಅಪೂರ್ಣ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

9.18. ಈ ಅಧಿಸೂಚನೆಯು ಜಾರಿಯಾದ ಮೇಲೆ ಈ ಅಧಿಸೂಚನೆಯಲ್ಲಿ ನಮೂದಿಸಿರುವ ಹುದ್ದೆಯ ನೇಮಕಾತಿಗೆ ಸಂಬಂಧಿಸಿದಂತೆ ಮಂಡಳಿಯು ಯಾವುದೇ ನಿಯಮಗಳು ಮತ್ತು ನಿರ್ದೇಶನಗಳನ್ನು ಜಾರಿ ಮಾಡಿದ್ದಲ್ಲಿ/ತಿದ್ದುಪಡಿ ಮಾಡಿದ್ದಲ್ಲಿ/ಪರಿಷ್ಕರಿಸಿದಲ್ಲಿ ಅವುಗಳನ್ನು ನೇಮಕಾತಿ ಪ್ರಕ್ರಿಯೆಯ ಸಮುಚಿತ ಹಂತದಲ್ಲಿ ಸೇರಿಸಿಕೊಳ್ಳಲಾಗುವುದು.

**10 <u>ಪರೀಕ್ಷಾರ್ಥ ಅವಧಿ:</u>**

ಆಯ್ಕೆಯಾದ ಅಭ್ಯರ್ಥಿಯನ್ನು ಮಂಡಳಿಯು ಕರ್ನಾಟಕ ರಾಜ್ಯದಾದ್ಯಂತ ಯಾವುದೇ ಪ್ರದೇಶಗಳಿಗೆ ಸ್ಥಳ ನಿಯುಕ್ತಿಗೊಳಿಸುವಂತಹ ಅಧಿಕಾರ ಹೊಂದಿರುತ್ತದೆ ಅದರಂತೆ ಅಭ್ಯರ್ಥಿಯು ಕರ್ನಾಟಕ ರಾಜ್ಯದಾದ್ಯಂತ ಯಾವುದೇ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸಲು ಬದ್ಧರಾಗಿರತಕ್ಕದ್ದು. ನೇಮಾಕಾತಿ ಹೊಂದಿದ ಅಭ್ಯರ್ಥಿಯು ಮಂಡಳಿಯ ಸೇವಾ ನಿಯಮಗಳನ್ವಯ 02 ವರ್ಷಗಳ ಪರೀಕ್ಷಾರ್ಥ (Probationary) ಅವಧಿಯಲ್ಲಿರುತ್ತಾರೆ.

**11 <u>ದುರ್ನಡತೆ:</u>**

ಒಬ್ಬ ಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವನೆಂದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಸಲ್ಲಿಸಿರುವನೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ವಾಸ್ತವಿಕ ಮಾಹಿತಿಯನ್ನು ಮರೆಮಾಚಿರುವನೆಂದು ಅಥವಾ ನೇಮಕಾತಿ ಉದ್ದೇಶಗಳಿಗಾಗಿ ನೆಡೆಸಲಾದ ಪರೀಕ್ಷೆಯಲ್ಲಿ /ಸಂದರ್ಶನದಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು ಅಥವಾ ಅನುಸರಿಸಲು ಪ್ರಯತ್ನಿಸಿರುವನೆಂದು ಅಥವಾ ಅವರ ನೇಮಾಕಾತಿ ಸಂಬಂಧದಲ್ಲಿ ಯಾವುದೇ ಇತರೆ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವನೆಂದು, ಕಂಡುಬಂದಲ್ಲಿ ಅವನು/ಅವಳು ಸ್ವತಃ ಕ್ರಿಮಿನಲ್ ವ್ಯವಹರಣೆಗಳಿಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡುವುದಲ್ಲದೆ; ಹುದ್ದೆಯ ಆಯ್ಕೆಯಿಂದ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು.

**ಸಹಿ**/-
ಕಾರ್ಯನಿರ್ವಾಹಕ ಕಾರ್ಯದರ್ಶಿ
ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ
ಬೆಂಗಳೂರು - 560012